ಅವರು ಕೂಡ ಈ ಕೆಲಸಗಳನ್ನು ಮಾಡಿಸುತ್ತಿದ್ದಾರೆ ಮಾನ್ಯ ಸದಸ್ಯರು ಏನು ಉತ್ತಮವಾದ ಪ್ರಶ್ನೆಯನ್ನು ನಾಗರಿಕರ ಸಲುವಾಗಿ ಕೇಳಿ ಸಲಹೆಯನ್ನು ಕೊಟ್ಟಿದ್ದಾರೋ ಆ ಪ್ರಕಾರ ಸರ್ಕಾರ ಈಗಾಗಲೇ ಕೆಲಸಗಳನ್ನು ಮಾಡಿಸುತ್ತಿದೆಯೆಂದು ಹೇಳಬಯಸುತ್ತೇನೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮಾನ್ಯ ಉಪಾಧ್ಯಕ್ಷರೆ, ಮೈಸೂರಿನಲ್ಲಿ ಗಿಡ ಮರಗಳನ್ನು ನೆಡುವಾಗ ಒಳ್ಳೆಯ ಸಸಿಗಳನ್ನು ನೆಡಬೇಕಾಗಿದೆ ಇವು ಹೇಗಿರಬೇಕೆಂದರೆ ಈ ಸಸಿಗಳ ಬೇರು ಆಳದವರೆಗೂ ಹೋಗುವಂತಿರಬೇಕು ಮತ್ತು ಮುಂದೆ ಮರವಾದಾಗ ಅದರ ರೆಂಬೆಗಳು ಬಿದ್ದು ಹೋಗದೇ ಇರುವಂತೆ ಇರಬೇಕು ಮತ್ತು ಈ ಮರಗಳು ಹೆಚ್ಚು ವರ್ಷಗಳು ಇರುವಂತಿರಬೇಕು ಅಂಥ ಗಿಡಗಳನ್ನು ನೆಡಬೇಕೆಂದು ನನ್ನ ಸಲಹೆ

ಶ್ರೀ ಸಿ ಚನ್ನಿಗಪ್ಪ ಮಾನ್ಯ ಉಪಾಧ್ಯಕ್ಷರೆ,– ಮಾನ್ಯ ಸದಸ್ಯರ ಸಲಹೆಯಂತೆ ಬಹುವಾರ್ಷಿಕ ಮರಗಳನ್ನು ಈಗಾಗಲೇ ನಾಟಿ ಮಾಡಿದ್ದೇವೆ ಮೊನ್ನೆ ಮೈಸೂರಿನಲ್ಲಿ ಸುಮಾರು 30 ಎಕರೆ ಜಮೀನಿಗೆ ಸ್ಯಾನಿಟೀರಿಯಂ ಹಾಸ್ಟೆಟಲ್ನಲ್ಲಿ ಕಂಪ್ಲೀಟ್ ಕಾಂಪೌಂಡ್ ಹಾಕಿಸಿ ಅಲ್ಲಿ ಮಾನ್ಯ ದೇವೇಗೌಡರು, ಮಾನ್ಯ ಮಂತ್ರಿಗಳು ಮತ್ತು ಅಲ್ಲಿನ ನಾಗರಿಕರು ಮತ್ತು ಪೌರ ಕಾರ್ಮಿಕರು ಸೇರಿ ಅನೇಕ ರೀತಿಯ ಸಸಿಗಳನ್ನು ನೆಟ್ಟಿದ್ದೇವೆ ಅವೆಲ್ಲವೂ ಬಹುವಾರ್ಷಿಕ ಮರಗಳಾಗಿರುವ ಕಾರಣ ಅವುಗಳು 100 ರಿಂದ 500 ವರ್ಷಗಳವರೆಗೆ ಇರತಕ್ಕಂಥವುಗಳೇ ಆಗಿವೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಆ ಕೆಲಸವನ್ನು ನಾವು ಮಾಡುತ್ತೇವೆ

ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ನಿರ್ಮಿಸುವುದು

164 (1301) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ನಿರ್ಮಿಸುವ ಉದ್ದೇಶ ಸರ್ಕಾರದ ಆಲೋಚನೆಯಲ್ಲಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ ಮಾನ್ಯ ಜವಳಿ ಸಚಿವರು

ಅ) ಹೌದು ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇದೆ

ಆ) ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಪಟ್ಟಣದಲ್ಲಿ ಪವರ್ ಲೂಮ್ಸ್ ಪಾರ್ಕ್ನ್ನು ಸ್ಥಾಪಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ

"ಶ್ರೀ ಗುಳೇದಗುಡ್ಡ ಪವರ್ಲೂಂ ಮಿನಿ ಪಾರ್ಕ್" ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಈ ಉದ್ದೇಶಿತ ಸಂಸ್ಥೆಯ

ಮುಖಾಂತರ 75 ಜನ ಉದ್ದಿಮೆದಾರರು ಉದ್ದಿಮೆ ಸ್ಥಾಪಿಸಲು ಮುಂದೆ ಬಂದಿರುತ್ತಾರೆ ಪಾರ್ಕ್ ಸ್ಥಾಪನೆಗೆ 19 ಎಕರೆ 37 ಗುಂಟೆ ಜಮೀನನ್ನು ಗುರುತಿಸಿದೆ ಕೆಐಎಡಿಬಿ ವತಿಯಿಂದ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ ಕೇಂದ್ರ ಸರ್ಕಾರದ ಎಸ್ಐಟಿಪಿ ಯೋಜನೆಯಡಿ ಸೌಲಭ್ಯ ಪಡೆಯಲು ಎಸ್ಪಿವಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ ಹೈಟೆಕ್ ಲೂಮ್ಸ್ ಹಾಗೂ ಜವಳಿ ಸಂಬಂದ ಕೈಗಾರಿಕೆಗಳಿಗೆ ಜಮೀನು ಹಾಗೂ ಮೂಲಭೂತ ಸೌಲಭ್ಯಗಳನ್ನು ಸದರಿ ಜವಳಿ ಪಾರ್ಕ್‌ನಲ್ಲಿ ನೀಡಲಾಗುವುದು

ಶ್ರೀ ಮೇಟಿ ಯಲ್ಲಪ್ಪ ಯಮನಪ್ಪ . ಮಾನ್ಯ ಅಧ್ಯಕ್ಷರೆ, ಮಾನ್ಯ ಜವಳಿ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಪಾರ್ಕ್ ಸ್ಥಾಪನೆಗೆ 19 ಎಕರೆ 37 ಗುಂಟೆ ಜಮೀನನ್ನು ಕೆಐಎಡಿಬಿ ವತಿಯಿಂದ ಅಭಿವೃದ್ಧಿಪಡಿಸಲು ಯೋಚಿಸಲಾಗಿದೆ ಎಂದು ಹೇಳುತ್ತಾರೆ ಆದರೆ ಅದನ್ನು ಯಾವಾಗ ಪ್ರಾರಂಭ ಮಾಡುತ್ತೇವೆ ಎನ್ನುವುದನ್ನು ಹೇಳಿಲ್ಲ ಇದು ಕೇವಲ ಕಾಗದದಲ್ಲಿ ಆದರೆ ನೇಕಾರರ ಪರಿಸ್ಥಿತಿ ಹೇಗಿದೆ? ಅವರ ಗತಿ ಏನು? ಅದನ್ನು ಇವರು ವಿಚಾರ ಮಾಡುತ್ತಿಲ್ಲ ಇದನ್ನು ಕೇವಲ ಕಾಗದದಲ್ಲಿ ಮಾಡುತ್ತೇವೆಂದು ಹೇಳಿದರೆ, ಯಾವಾಗ ಇದನ್ನು ಮಾಡುತ್ತಾರೆ? ಈಗಾಗಲೇ ನೇಕಾರರಿಗೆ ಜವಳಿ package ಎಂದು ಮಾಡಿದ್ದಾರೆ, ಅದರಿಂದ ಅವರಿಗೆ ಯಾವ ರೀತಿಯಲ್ಲೂ ಕೂಡ ಲಾಭವಾಗಿಲ್ಲ ಹೆಸರಿಗೆ ಮಾತ್ರ ಮಾಡಿದರೆ ಮುಂದೆ ನೇಕಾರರ ಗತಿ ಏನು? ಈ ಜವಳಿ ಪಾರ್ಕ್‌ನಲ್ಲಿ ಹೈಟೆಕ್ ಲೂಮ್ಸ್ ಹಾಗೂ ಜವಳಿ ಸಂಬಂಧಪಟ್ಟ ಕೈಗಾರಿಕೆಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ ಈಗಾಗಲೇ ಸರ್ಕಾರ 20 HP ಯವರೆಗೆ ರಿಯಾಯಿತಿಯನ್ನು ಕೊಡುತ್ತಿದ ಅಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಜವಳಿ ಪಾರ್ಕ್ ನಿರ್ಮಿಸಿದರೆ ಆಗ 20 HPಗಿಂತ ಹೆಚ್ಚು HPಯನ್ನು ನೇಕಾರರು ಉಪಯೋಗ ಮಾಡಬೇಕಾಗುತ್ತದೆ ಆಗ ಅದಕ್ಕೂ ಕೂಡ ತಾವು subsidyಯನ್ನು ಕೊಡುತ್ತೀರಾ? ಅವತ್ತು ಅವರು ಕೊಡುತ್ತೇವೆಂದು ಹೇಳಿದರು, ಇನ್ನೊಂದು ವಿಚಾರವೇನೆಂದರೆ ಈ ಸಣ್ಣ ಸಣ್ಣ ನೇಕಾರರಿಗೆ ಸೇಲಂ ಮಾದರಿಯ ರೀತಿಯಲ್ಲಿ ವಸತಿ ಸೌಲಭ್ಯಕ್ಕೆ ಏನಾದರೂ package ಮಾಡಿಕೊಡುತ್ತೀರಾ? ಅದನ್ನು ತಾವು ಹೇಳಬೇಕು ಇನ್ನು ಕೈಮಗ್ಗ ನೇಕಾರರಿಗೆ ನಮ್ಮ ಜಿಲ್ಲೆಗಳಲ್ಲಿ ಗುಳೇದ ಗುಡ್ಡ, ಅಮಿನ್‌ಘಡ, ಕಮ್ಮತ್ತಿಗಿ, ಸುಳಿಬಾವಿ ಇಲ್ಲೆಲ್ಲಾ 20 ಸಾವಿರ ಜನಸಂಖ್ಯೆಯನ್ನು ಹೊಂದಿದಂತಹ ದೊಡ್ಡ ಊರುಗಳಾಗಿವೆ ಅಲ್ಲೆಲ್ಲಾ ಹೆಚ್ಚಾಗಿ ಕೈಮಗ್ಗ ನೇಕಾರರಿದ್ದಾರೆ ಕೈಮಗ್ಗದ ನೇಕಾರರಿಗೆ ಜವಳಿ ಪಾರ್ಕ್ ಮಾಡುವುದಕ್ಕೆ ಸರ್ಕಾರ ಏನಾದರೂ ಯೋಜನೆ ಮಾಡುತ್ತದೆಯೇ? ಅವರಿಗೂ ಕೂಡ ಅದನನು ಮಾಡಿಕೊಡಬೇಕಾಗುತ್ತದೆ ಅವರಿಗೆ ಜವಳಿ ಪಾರ್ಕ್ ಅನ್ನು ಅಮಿನ್‌ಘಡ, ಕಮ್ಮತ್ತಿಗಿ, ಸುಳಿಬಾವಿನಲ್ಲಿ

ಎಲ್ಲಾದರೂ ಒಂದು ಕಡೆ ಕೈಮಗ್ಗ ನೇಕಾರರಿಗೆ ಜವಳಿ ಪಾರ್ಕ್ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ

ಶ್ರೀ ಅಪ್ಪಾ ಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ ಮಾನ್ಯ ಹಿರಿಯ ಸದಸ್ಯರಾದ ಮೇಟಿಯವರು ಗುಳೇದ ಗುಡ್ಡದಲ್ಲಿ ಜವಳಿ ಪಾರ್ಕ್ ಮಾಡುವುದರ ಬಗ್ಗೆ ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅಲ್ಲಿ ಈಗಾಗಲೇ Mini Textile Parkನ ಕೆಲಸ ಪ್ರಾರಂಭವಾಗಿದೆ ಅದಕ್ಕೆ ಬೇಕಾದಂತಹ ಜಮೀನು 19 ಎಕರೆ 37 ಗುಂಟೆ ಗುರುತಿಸಿದ್ದು, ಎಕರೆಗೆ 68 ಲಕ್ಷ ರೂಪಾಯಿ ಎಂದು ಬೆಲೆ ನಿಗದಿ ಮಾಡಿದ್ದೇವೆ 2008ನೆ ಸಾಲಿಗೆ ಈ ಒಂದು ಪೂರ್ತಿಯಾಗಿ ಅಲ್ಲಿ ಪಾರ್ಕ್ ಕೆಲಸ ಪ್ರಾರಂಭವಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ ಅದರ ಜೊತೆಗೆ ಅವರು ಆ ಭಾಗದಲ್ಲಿ ಒಂದು Handloom Park ಆಗಬೇಕೆಂದು ಕೇಳುತ್ತಿದ್ದಾರೆ ಈಗಾಗಲೇ ಬಾದಾಮಿ ತಾಲ್ಲೂಕಿನ ಕೆರೂರಿನಲ್ಲಿ Handloom Park ಮಾಡಬೇಕೆಂದು ನಮ್ಮ ರಾಜ್ಯ ಸರ್ಕಾರದಿಂದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ ತಮ್ಮ ಮನವಿ ಏನಿದೆ ಅದನ್ನು ಪರಿಶೀಲಿಸಿ, ಮೊನ್ನೆ ಬಜೆಟ್‌ನಲ್ಲಿ ಘೋಷಣೆ ಮಾಡುದಂತಹ 100 ಕೋಟಿ ರೂಪಾಯಿಯ ಯೋಜನೆಯಡಿಯಲ್ಲಿ ಉದ್ಯೋಗ ಸೃಷ್ಟಿ ಮಾಡಬೇಕೆನ್ನುವುದರ ಸಂಬಂಧ ಏನೊಂದು policyಯನ್ನು ತರುತ್ತಿದ್ದೇವೆ, ಅದರಲ್ಲಿ ತಮ್ಮ ಮನವಿಯನ್ನು ಅಳವಡಿಸಿಕೊಂಡು ಅದನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ ಅದರ ಜೊತೆಗೆ Handloom Weaversಗೆ ವಿಶೇಷ package ಅನ್ನು ಬಹಳ ವರ್ಷದಿಂದ ಇಟ್ಟರಲಿಲ್ಲ ಈ ವರ್ಷ 60 ಕೋಟಿ ರೂಪಾಯಿಯಲ್ಲಿ 15 ಕೋಟಿ ರೂಪಾಯಿಯನ್ನು ಈ ಒಂದು ನಿಗಮಕ್ಕೆ ಇಡಲಾಗಿದೆ ಅದರಲ್ಲಿ ಕೂಡ ನೇಕಾರರ ಸಮಸ್ಯೆಗಳನ್ನು ಬಗೆಹರಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ ಈಗಾಗಲೇ 20 HPಗೆ ಇರುವಂತಹ subsidyಯನ್ನು 40 HPಗೆ ಹೆಚ್ಚಿಸಿ ಎಂದು ಹೇಳುತ್ತಿದ್ದಾರೆ ಅದರ ಬಗ್ಗೆ ನಾನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇನೆ

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ . ಪರಿಶೀಲನೆ ಬೇಡ ಎಂದರೂ ಕೂಡ ಅದನ್ನೇ ಹೇಳುತ್ತಿದೀರಿ

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣ ಶೆಟ್ಟಿ . 2003–04 ಹಾಗೂ 2004–05ನೇ ಸಾಲಿನಲ್ಲಿ 10 HPಯವರೆಗೆ ಇದ್ದುದ್ದನ್ನು 2006–07 ಹಾಗೂ 2007–08 ರಲ್ಲಿ 20 HPಯವರೆಗೆ ಹೆಚ್ಚಿಗೆ ಮಾಡಿದ್ದೇವೆ ಈ ವರ್ಷ ಕೆಲಸ ನಡೆಯುತ್ತಿದೆ

ಉಪಾಧ್ಯಕ್ಷರು ಮಾಡಿಕೊಡುತ್ತಾರೆ ಅವರ ಹತ್ತಿರ ಹೋಗಿ ಚರ್ಚೆ ಮಾಡಿ

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ ಸೇಲಂ ಮಾದರಿಯಲ್ಲಿ ಕೈಮಗ್ಗ ನೇಕಾರರಿಗೆ ವಸತಿ ಸೌಲಭ್ಯವನ್ನು ಮಾಡಿಕೊಡುತ್ತೀರ?

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ ನಾಲ್ಕು ಜಿಲ್ಲೆಗಳಲ್ಲಿ ಬಜೆಟ್ ಘೋಷಣೆ ಮಾಡಿರುವ ಪ್ರಕಾರ ಯೋಜನೆಯನ್ನು ಕಳುಹಿಸಿಕೊಟ್ಟಿದ್ದು, ಈಗಾಗಲೇ ರಾಜೀವ್ ಗಾಂಧಿ ಹೌಸಿಂಗ್ ಯೋಜನೆಯಲ್ಲಿ 5,000 ಮನೆಗಳನ್ನು ಕಟ್ಟಬೇಕೆಂದು ಆಗಿದ್ದು, ಅಲ್ಲಿ ನೂರು ಮನೆಗಳ ಕಟ್ಟಡ ಕೂಡ ಮುಗಿದಿವೆ ಇನ್ನು ಉಳಿದಂತಹ ಮನೆಗಳ ಕೆಲಸವನ್ನು ಪ್ರಾರಂಭ ಮಾಡಬೇಕಾಗಿದ್ದು, ಬಾಗಲಕೋಟೆ, ಬಿಜಾಪುರ,ಗದಗ್ ಮತ್ತು ದಾರವಾಡ ಈ ರೀತಿಯಾಗಿ ತೆಗೆದುಕೊಂಡು ರಾಜೀವ್ ಗಾಂಧಿ ಹೌಸಿಂಗ್ ಯೋಜನೆಯಲ್ಲಿ ಕೂಡ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದೆ ಅದಕ್ಕೆ 30,000 ರೂಪಾಯಿ shedಗಳನ್ನು ನಿರ್ಮಾಣ ಮಾಡುವುದಕ್ಕೆ ಹಾಗೂ 5,000 ರೂಪಾಯಿ ರಾಜ್ಯಸರ್ಕಾರದ ಬಜೆಟ್ನಿಂದ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ ಅದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆ ಅವರು shedಗಳ list ಅನ್ನು ಕಳುಹಿಸಿದ್ದಾರೆ, ಅದನ್ನು ಮಾಡುವಂತಾದ್ದು ಆಗಿದೆ ಮಾನ್ಯ ಸದಸ್ಯರು ಸೇಲಂ ಮಾದರಿಯಲ್ಲಿ ಮಾಡಬೇಕೆಂದು ಏನು ಹೇಳುತ್ತಿದ್ದಾರೆ, ಅದನ್ನು ನಾನು ತರಿಸಿಕೊಂಡು ಪರಿಶೀಲಿಸಿ ಆ ರೀತಿ ಮಾಡುವಂತೆ ನನ್ನ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ ನಾವು ಏನು ಹೇಳಿದರೂ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆಂದು ಹೇಳುತ್ತಾರೆ ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವೇನು? ಇವರು ಕೇವಲ 35,000 ರೂಪಾಯಿ ಒಂದು ಮನೆಗೆ ಕೊಡುತ್ತಾರೆ ಅದರಲ್ಲಿ 10,000 ರೂಪಾಯಿ subsidy ಕೊಡುತ್ತಾರೆ 35,000 ರೂಪಾಯಿಯಲ್ಲಿ ನೇಕಾರರ ಮನೆಯಾಗುವುದಿಲ್ಲ, 50,000 ರೂಪಾಯಿಗೆ ಒಂದು ಮನೆ ಕೊಡಬೇಕು ಅದಕ್ಕೆ 25,000 subsidy ಕೊಡಬೇಕು ಇದರಲ್ಲಿ ನಿಮ್ಮ ರಾಜ್ಯ ಸರ್ಕಾರದ ಮಹತ್ವ ಏನೂ ಇಲ್ಲವೇ? ಎಂದು ಕೇಳುತ್ತಿದ್ದೇನೆ

ಸಣ್ಣ ನೀರಾವರಿ ಯೋಜನೆಗಳು

165 (297) ಶ್ರೀ ನರೇಂದ್ರಬಾಬು ನ ಲ (ರಾಜಾಜಿನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ರೈತರ ಪರವಾಗಿ ಸಣ್ಣ ನೀರಾವರಿಗಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಯಾವುವು,

ಆ) ಈ ಯೋಜನೆಗಳಿಂದ ಯಾವ ಯಾವ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲಾಗಿದೆ,